- - ಓ ಎಸ್ ನಂ.205/2022

ಪಿ.ಡಬ್ಲ್ಯೂ :1

ದಿನಾಂಕ : 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ.

ದಾವೆಯೊಡನೆ ವಾದಿಯು ಸಲ್ಲಿಸಿರುವ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ .

ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಯಿತು .

| | |
|---|---|
| ನಿಪಿ-1<br>ನಿಪಿ -1 (ಎ ರಿಂದ ಇ ) | ದಿಃ12-03-2021 ರಂದು 1 ರಿಂದ 4 ನೇ ಪ್ರತಿವಾದಿಗಳು (4 ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರಾಗಿದ್ದು ಅವರ ಪರವಾಗಿ 1 ನೇಪ್ರತಿವಾದಿ) ದಾವಾ ಸ್ವತ್ತುಗಳಿಗೆ ಸಂಬಂಧಿಸಿ ನನಗೆ ಮತ್ತು ಪತ್ನಿಯ ಹೆಸರಿಗೆ ಬರೆದುಕೊಟ್ಟಿರುವ ನೋಂದಾಯಿತ ಅಸಲು ಕ್ರಯದ ಕರಾರು ಪತ್ರ , ಸಾಕ್ಷಿಯು ನಿಪಿ -1 ರ ಎಲ್ಲಾ ಪುಟಗಳಲ್ಲಿ ಗುರುತಿಸಿದ 1 ರಿಂದ 3 ನೇ ಪ್ರತಿವಾದಿಗಳ ಸಹಿಗಳು. ನಿಪಿ -1 ರ 9 ನೇ ಪುಟದಲ್ಲಿ ಸಾಕ್ಷಿಯು ಗುರುತಿಸಿದ ಅವರ ಮತ್ತು ಅವರ ಪತ್ನಿಯ ಸಹಿ . ನಿಪಿ -1 ಕ್ಕೆ ವೆಂಕಟರಮಣ ಕೆ ಭಟ್ಟ ಮತ್ತು ಬಿ ಆರ್ ಶ್ರೀಧರ್ ಮುತ್ತು ಟಿ ಹೆಚ್ ಮಂಜುನಾಥ ರವರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ . ಹೆಚ್ ಸಿ ಶಿವಶಂಕ್ ರವರು ನಿಪಿ -1 ನ್ನು ತಯಾರಿಸಿಕೊಟ್ಟಿದ್ದಾರೆ . |
| ನಿಪಿ-2<br>ನಿಪಿ -2 ಎ ರಿಂದ ಎಫ್ | ದಿಃ 07-01-2022 ರಂದು ಪ್ರತಿವಾದಿಗಳಿಗೆ ನಿಪಿ -1 ರ ಸಂಬಂಧ 20 ಲಕ್ಷ ರೂಗಳನ್ನು ನೀಡಿದ್ದು ಆ ಸಂಬಂಧ ನಾವು ಮಾಡಿಕೊಂಡಿರುವ ಪರಸ್ಪರ ಒಡಂಬಡಿಕೆ ನೋಟರಿ ಪ್ರಮಾಣಿತ ಕರಾರು ಪತ್ರ . ನಿಪಿ -2 ರ 3 ನೇ ಪುಟದಲ್ಲಿಸಾಕ್ಷಿಯು ಗುರುತಿಸಿದ ಅವರ ಮತ್ತು ಅವರ ಪತ್ನಿಯ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಸಹಿಗಳು . ನಿಪಿ -2 ಕ್ಕೆ ಪಿ ಕೆ ಕೊಟ್ಟಭಾಗಿ ಮತ್ತು ಮತ್ತೊಬ್ಬ ವ್ಯಕ್ತಿ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ . ಸದರಿ ಸಾಕ್ಷಿ ಪ್ರತಿವಾದಿಗಳು ಕರೆ ತಂದಿದ್ದ ಸಾಕ್ಷಿಯಾಗಿದ್ದು ಅವರು ಹೆಸರು ಹೇಳಲು ನೆನಪಾಗುತ್ತಿಲ್ಲ . ನಿಪಿ -2 ನ್ನು ಬೆಂಗಳೂರಿನ ಮಮತಾ ಎನ್ ಕೆ ರವರು |

| | |
|---|---|
| | ತಯಾರಿಸಿಕೊಟ್ಟಿದ್ದಾರೆ . |
| ನಿಪಿ-3 ರಿಂದ 5 | ದಾವಾ ಸ್ವತ್ತಿಗೆ ಸಂಬಂಧಿಸಿದ 3 ಗಣಕೀಕೃತ ಪಹಣಿಗಳು |
| ನಿಪಿ-6 | ದಿಃ 02-06-2022 ರಂದು ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ್ದ ನೋಟಿಸಿನ ಕಚೇರಿ ಪ್ರತಿ |
| ನಿಪಿ-7 ರಿಂದ 10 | 4 ಅಂಚೆ ರಸೀದಿಗಳು |
| ನಿಪಿ -11 ರಿಂದ 14 ನಿಪಿ -11 (ಎ) ರಿಂದ 14 (ಎ) | ನೋಟಿಸ್ ಜಾರಿಯಾಗದೆ ಹಿಂತಿರುಗಿ ಬಂದ ನಾಲ್ಕು ಅಂಚೆ ಲಕೋಟೆಗಳು (ಸದರಿ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ತೆಗೆದು ಅವುಗಳ ಒಳಗೆ ಲಭ್ಯವಿದ್ದ ನೋಟೀಸ್‌ಗಳನ್ನು ನಿಶಾನೆಗಳಾಗಿ ಗುರುತಿಸಲಾಯಿತು ) |

(ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .